1	2	6	7		8	9
24.	ಗದಗ್	1.ಮುಳಗುಂದ	48.18	21.57	1.ಗದಗ-ಬೆಟಗೇರಿ	1116.00
					2.ರೋಣ	728.16
					3. ಲಕ್ಷ್ಮೇಶ್ವರ	1519.61
					4.ಗದಗಬೆಟಗೇರಿ (UGD)	1114.66
25	ಹಾವೇರಿ	1.ಬ್ಯಾಡಗಿ	703.50	282.47		
		2. ರಾಣೆಬೆನ್ನೂರು	1186.50	805.10		
		3. ಹಾವೇರಿ	1321.00	357.04		
26.	ಉತ್ತರಕನ್ನಡ				1.ಭಟ್ಕಳ	355.03

ಗುಡಿ ಕೈಗಾರಿಕೆಗಳು ಕಣ್ಮರೆಯಾಗುತ್ತಿರುವ ಬಗ್ಗೆ

247 (571) ಶ್ರೀ ಅಂಗಾರ.ಎಸ್(ಸೂಳ್ಯ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗಾಂಧೀಜಿಯವರ '' ಗ್ರಾಮೋದಯ'' ಕಲ್ಪನೆಯ ಗುಡಿ ಕೈಗಾರಿಕಾಗಳಲ್ಲೊಂದಾದ ''ಕುಂಬಾರಿಕೆ'' ಮಡಕೆ ವೃತ್ತಿ ಕೆಲಸ ಕಣ್ಮರೆಯಾಗುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲಿ, ಈ ನಿಟ್ಟಿನಲ್ಲಿ ತಲತಲಾಂತರದ ವಂಶಪಾರಂಪರಿಕ ಕಸುಬು ನಶಿಸಿಹೋಗದಂತೆ ಯಾವ ಮುಂಜಾಗರೂಕ ಕ್ರಮ ಕೈಗೊಳ್ಳಲಾಗುವುದು?

ಇ) ಗ್ರಾಮೋದ್ಯೋಗ ಕಾಪಾಡುವ ದಿಕ್ಕಿನಲ್ಲಿ ಈ ಸಮುದಾಯಕ್ಕೆ ಸರ್ಕಾರದ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗುವುದೇ?

ಈ) ಸದರಿ ಸೌಲಭ್ಯ ಹಾಗೂ ಸಹಾಯಗಳಾವುವು (ವಿವರ ಪಟ್ಟಿ ಲಗತ್ತಿಸಿ)?

ಉ) ಯಾವ ಯಾವ ಇಲಾಖೆಗಳಿಂದ ಈ ಪ್ರಯೋಜನ ಫಲಾನುಭವಿಗಳಿಗೆ ಲಭ್ಯವಾಗುತ್ತಿದೆ ಮತ್ತು ಸರ್ಕಾರದ ಲಭ್ಯವಾಗುತ್ತಿದೆ ಮತ್ತು ಸರ್ಕಾರದ ಈ ನೆರವಿನಿಂದ ''ಕುಂಭಾರ ಕಲೆ'' ಜೀವಂತವಾಗಿರಲು ಅನುಕೂಲವಾಗುವುದಿಲ್ಲವೇ?

ಶ್ರೀ ಎಸ್. ಆರ್. ಕಾಶಪ್ಪನವರು (ಸಣ್ಣ ಕೈಗಾರಿಕಾ ಸಚಿವರು) :

ಅ) ಬಂದಿದೆ.

ಆ) ಸರ್ಕಾರವು ಆಧುನಿಕ ಶೈಲಿಯಲ್ಲಿ, ಕಲಾತ್ಮಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲು ಉತ್ತೇಜನ ನೀಡಿ, ಇಂದಿನ ಜನರಿಗೆ ಅವರಿಗೆ ಬೇಕಾದ ರೀತಿಯಲ್ಲಿ ಸರಬರಾಜು ಮಾಡಲು ವ್ಯವಸ್ಥೆ ಗೊಳಿಸಲಾಗುತ್ತಿದೆ.

ಇ) ಸರ್ಕಾರ ಕುಂಬಾರಿಕೆ ವಸ್ತುಗಳ ಮಾರಾಟಕ್ಕಾಗಿ ಪ್ರತೀ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಮಾರಾಟ ಸಂಘ (ಡಿ ಎಸ್ ಎಂ ಎಸ್)ಗಳ ಮುಖಾಂತರ ಮಾರಾಟ ವ್ಯವಸ್ಥೆ ಕಲ್ಪಿಸಿದೆ.

ಈ) ಖಾನಾಪುರ ಹಾಗೂ ರಾಮನಗರಗಳಲ್ಲಿ ತರಬೇತಿ ಕೇಂದ್ರಗಳಿದ್ದು, ಕೌಶಲ್ಯ ಅಭಿವೃದ್ಧಿಯ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಎಲ್ಲಾ ಕಸುಬುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಕಾಮನ್ ಫೆಸಿಲಿಟೀಸ್ ಗಳನ್ನು ಕ್ಲಸ್ಟರ್ ಅಭಿವೃದ್ಧಿ ಯೋಜನೆಯಡಿ ಒದಗಿಸಲು ಸಂಘ: ಸಂಸ್ಥೆಗಳ ಮುಖಾಂತರ ಕ್ರಮ ವಹಿಸಲಾಗುತ್ತಿದೆ.

ಉ) ಕುಂಬಾರಿಕೆ ಕಲೆ ಜೀವಂತವಾಗಿಡಲು ಅನುಕೂಲವಾಗುವಂತೆ ಸರ್ಕಾರವು ಈ ಕೆಳಕಂಡ ನಿಗಮ: ಮಂಡಲಿಗಳಿಂದ ಧನ ಸಹಾಯ ಸೌಲಭ್ಯಗಳನ್ನು ನೀಡುತ್ತಿದೆ.

1. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ

2. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ

3. ರಾಜ್ಯ ಹಣಕಾಸು ಸಂಸ್ಥೆ, ಮತ್ತು

4. ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ (ನಿ) ಇವುಗಳಿಂದ ಧನಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ನಾಗಮಂಗಲ ಟೌನ್ ಪಂಚಾಯತಿಯ ಹಳೇ ವಾಣಿಜ್ಯ ಕಟ್ಟಡಗಳು ಶಿಥಿಲದ ಕುರಿತು

250 (508) ಶ್ರೀ ಎಸ್. ಚಲುವರಾಯ ಸ್ವಾಮಿ (ನಾಗಮಂಗಲ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ನಾಗಮಂಗಲ ಟೌನ್ ಪಂಚಾಯತಿಯ ಹಳೇ ವಾಣಿಜ್ಯ ಕಟ್ಟಡಗಳು ತುಂಬಾ ಶಿಥಿಲವಾಗಿದೆ ಹಾಗೂ ರಸ್ತೆ ಹಾಗೂ ಒಳಚರಂಡಿ ವ್ಯವಸ್ಥೆ ಹದಗಡಟ್ಟಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

2. ಬೆಳ್ಳೂರು ಗ್ರಾಮ ಪಂಚಾಯಿತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಇದೊಂದು ವ್ಯಾಪಾರ ಕೇಂದ್ರವಾಗಿದ್ದು ಜನಸಂಖ್ಯೆ ಸುಮಾರು 15,000 ಕ್ಕೂ ಮೇಲ್ಪಟ್ಟಿದ್ದು ಈ ಗ್ರಾಮಪಂಚಾಯಿತಿಯನ್ನು ಟೌನ್ ಪಂಚಾಯಿತಿಗೆ ಪರಿವರ್ತನೆ ಮಾಡಬೇಕೆಂಬ ಮನವಿ ಇದುವರೆವಿಗೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಟೌನ್ ಪಂಚಾಯಿತಿಯನ್ನಾಗಿ ಯಾವಾಗ ಪರಿವರ್ತನೆ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಮಂತ್ರಿಗಳು)

1. ಈ ಬಗ್ಗೆ ಪ್ರಸ್ತಾವನೆಯು ಪೌರಾಡಳಿತ ನಿರ್ದೇಶಕರವರಿಂದ ಬರುವುದು ಬಾಕಿ ಇರುತ್ತದೆ.

2. ಪ್ರಸ್ತಾವನೆ ಬಂದಿಲ್ಲ. ಜಿಲ್ಲಾಧಿಕಾರಿಗಳಿಂದ ಈ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಜನಗಣತಿ ನಿರ್ದೇಶನಾಲಯದ ನಿರ್ಬಂಧ ತೆರವಾದ ನಂತರ (31-3-2001 ರ ನಂತರ) ಪರಿಶೀಲಿಸಲಾಗುವುದು.